ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.286/2022 ,

ಚಾಸಾ-9, ಫ್ರಾಸಾ -6

| | |
|---|---|
| ಹೆಸರು | ಶೇಖರ್ |
| ತಂದೆಯ ಹೆಸರು | ಸುಂದರಾ |
| ವಯಸ್ಸು | 52 ವರ್ಷ |
| ಕೆಲಸ | ರಿಕ್ಷಾ ಚಾಲಕ |
| ವಾಸ | ಬನ್ನಡ್ಕ , ಅಚ್ಚರಿ ಕಟ್ಟೆ |
| ಪ್ರಮಾಣೀಕರಿಸಿದ ದಿನಾಂಕ | 24-02-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಆರೋಪಿ ಗೊತ್ತಿಲ್ಲ . ನನಗೆ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ . ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ನಾನು ಒಂದು ದಾಖಲೆಗೆ ಸಹಿ ಮಾಡಿದ್ದೇನೆ , ಅದನ್ನು ಹೊರತು ಪಡಿಸಿ ಬೇರೆ ಏನೂ ಗೊತ್ತಿಲ್ಲ . ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ . ಸಾಕ್ಷಿ ಮಹಜರ್ ಮತ್ತು ಕರಡು ನಕ್ಷೆಗಳಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ-4(ಬಿ ) ಮತ್ತು ನಿಪಿ-5(ಬಿ) ಎಂದು , ಗುರುತಿಸಲಾಯಿತು .

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ 27-12-2021 ರಂದು ಚಾಸಾ-2 ರವರು ತೋರಿಸಿಕೊಟ್ಟ ಮೇರೆಗೆ ತಕ್ಷೀರು ಸ್ಥಳವಾದ ಮಂಗಳೂರು ಸೋಲ್ಲಾಪುರ ರಾಷ್ಟ್ರೀಯ ಹೆದ್ದಾರಿ 169 ಸಾರ್ವಜನಿಕ ಡಾಂಬಾರು ರಸ್ತೆಯ ಬಳಿ

ನನ್ನ ಹಾಗೂ ಚಾಸಾ-8 ರವರ ಸಮಕ್ಷಮದಲ್ಲಿ ಸ್ಥಳ ಮಹಜರ್ ಹಾಗೂ ಕರಡು ನಕಾಶೆಯನ್ನೂ ಸಹ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ .

ಸದರಿ ಮಹಜರನ್ನು 12-30 ರಿಂದ 1-30 ಗಂಟೆಯವರೆಗೆ ತಯಾರಿಸಿದ ಮಹಜರಿಗೆ ಸಹಿ ಮಾಡಿರುತ್ತೇನೆ ಸರಿಯಲ್ಲ . ಸದರಿ ಸಮಯದಲ್ಲಿ  ಅಪಘಾತ ಪಡಿಸಿದ ಜೀಪ್ ಸಂಖ್ಯೆ ಕೆಎ-19 ಜಿ 0703 ಹಾಗೂ ಅಪಘಾತಕ್ಕೆ ಒಳಗಾದ ಸ್ಕೂಟರ್ ನಂ . ಕೆಎ-19 ಹೆಚ್.ಸಿ 3254 ನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಈ ಪ್ರಕರಣದ ಬಗ್ಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯಮಾಡುವ ಸಲುವಾಗಿ ತಕ್ಷೀರು ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲುಃ  ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ ,.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ   ಹೇಳಿ  ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ